ಇಂದು ದಿ:**13-03-2026** ರಂದು ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಶ್ರೀ ಕೆ.ಸಿ ವಕೀಲರಿಂದ 5 ನೇ ಪ್ರತಿವಾದಿಗಳ ಪರಃ**

2014 ರಲ್ಲಿ ತನ್ನ ತಂದೆ ತೀರಿಕೊಂಡರು. ಮರಿಯಪ್ಪ ಬಹಳ ದಿನಗಳ ಹಿಂದೆ ತೀರಿಕೊಂಡಿರುತ್ತಾರೆ. ಮರಿಯಪ್ಪನ ಮಕ್ಕಳು ಎಂದರೆ ಗಂಗಮ್ಮ, ಶೇಖರಪ್ಪ, ಪರಸಪ್ಪ, ಹನುಮಂತಪ್ಪ, ಮಹಂತಮ್ಮ ಮತ್ತು ಬಸವಂತಪ್ಪ ಎಂದರೆ ಸರಿ. ಮರಿಯಪ್ಪನಿಗೆ 7 ಎಕರೆ ಜಮೀನು ಇತ್ತು. ಈ ದಾವೆಯಲ್ಲಿ 5 ನೇ ಪ್ರತಿವಾದಿ ಏನು ತಕರಾರು ಸಲ್ಲಿಸಿದ್ದಾನೆ ಎಂದು ನಾನು ತಿಳಿದುಕೊಂಡಿಲ್ಲ. 3 ನೇ ಪ್ರತಿವಾದಿಗೆ 3 ಜನ ಮಕ್ಕಳು ಇರುತ್ತಾರೆ. 3 ನೇ ಪ್ರತಿವಾದಿಯ ಗಂಡು ಮಗನ ಹೆಸರು ಆಂಜನೇಯ ಎಂದು ಇರುತ್ತದೆ. ಹನುಮಂತಪ್ಪ ಈತನಿಗೆ ಇಬ್ಬರು ಹೆಂಡತಿಯರು. ಅವರೆಂದರೆ ಕರಿಯಮ್ಮ ಮತ್ತು ಗಿರಿಜಮ್ಮ. ಕರಿಯಮಂ ಇವಳಿಗೆ ಒಂದು ಮಗು ಇರುತ್ತದೆ. ಗಿರಿಜಮ್ಮ ಇವಳಿಗೆ 3 ಜನ ಮಕ್ಕಳು ಇರುತ್ತಾರೆ. ಹನುಮಂತಪ್ಪ ಈತನ ಹೆಂಡತಿ ಗಿರಿಜಮ್ಮ ಮತ್ತು ಅಂಜನೇಯ ಇವರನ್ನು ಈ ದಾವೆಯಲ್ಲಿ ಪಕ್ಷಗಾರ ಎಂದು ಮಾಡಿದ್ದೇನೆ. ಹನುಮಂತಪ್ಪ ಮಾಡಿಕೊಟ್ಟಿದ್ದಾನೆ ಎಂದು ಹೇಳುವ ದಾನಪತ್ರವನ್ನು ನಾನು ನೋಡಿಲ್ಲ. ದಾನಪತ್ರದ ಮುಖಾಂತರ ಹೋದ ಆಸ್ತಿ ಮೂಲತಃ ಮರಿಯಪ್ಪನ ಆಸ್ತಿ ಇರುತ್ತದೆ. ಮರಿಯಪ್ಪ ವೀರಭದ್ರಯ್ಯ ಎನ್ನುವವನಿಗೆ ಜಮೀನು ಮಾರಾಟ ಮಾಡಿದ್ದನು. ಒಟ್ಟು ಕುಟುಂಬದ ಅಡಚಣೆಗೆ ಮಾರಿದ್ದರು, ನಂತರ ಒಟ್ಟು ಕುಟುಂಬದಿಂದ ಬಿಡಿಸಿಕೊಂಡಿರುತ್ತಾರೆ. 3 ನೇ ಪ್ರತಿವಾದಿಯ ಹೆಸರಿಗೆ ವೀರಭದ್ರಯ್ಯ ಕ್ರಯಪತ್ರ ಮಾಡಿಕೊಟ್ಟಿರುತ್ತಾರೆ. ವೀರಭದ್ರಯ್ಯ ಈತನಿಗೆ ಮಾರಾಟ ಮಾಡುವ ಸಮಯದಲ್ಲಿ ಅಥವಾ ನಂತರದಲ್ಲಿ ನಮ್ಮ ಕುಟುಂಬದಲ್ಲಿ ಯಾವುದೇ ಪಾಲುವಿಭಾಗ ಆಗಿಲ್ಲ. 2 ನೇ ಪ್ರತಿವಾದಿಗೆ 4

ಜನ ಮಕ್ಕಳು. 2 ನೇ ಪ್ರತಿವಾದಿಯ ಮಕ್ಕಳ ವಿರುದ್ಧ 3 ನೇ ಪ್ರತಿವಾದಿಯ 2 ನೇ ಹೆಂಡತಿ ಗಿರಿಜಮ್ಮ ಒಂದು ದಾವೆ ಮಾಡಿದ್ದಳು ಎಂದರೆ ಸರಿ. ಸದರಿ ದಾವೆ ವಜಾ ಆಯಿತು. ತನಗೆ ತೊಂದರೆ ಮಾಡಬಾರದು ಎಂದು ಗಿರಿಜಮ್ಮ ದಾವೆ ಮಾಡಿದ್ದಳು. 5 ನೇ ಪ್ರತಿವಾದಿ 5 ವರ್ಷ ಮನೆಬಿಟ್ಟು ಹೋಗಿದ್ದನು. ಈ ದಾವೆಯಲ್ಲಿ 2 ನೇ ಪ್ರತಿವಾದಿ ಖರೀದಿ ಮಾಡಿದ ಆಸ್ತಿಗಳನ್ನು ಸಹ ಸೇರಿಸಿದ್ದೇವೆ ಎಂದರೆ ಸರಿ. ಗಿರಿಜಮ್ಮ ದಾನಪತ್ರದ ಮೂಲಕ ಪಡೆದ ಆಸ್ತಿ ನಮ್ಮೆಲ್ಲರ ಸ್ವಾಧೀನದಲ್ಲಿ ಇದೆ. 3 ನೇ ಪ್ರತಿವಾದಿಯ ಮೊದಲನೇಯ ಹೆಂಡತಿ ಚನ್ನಗಿರಿ ತಾಲೂಕಿನ ಶಿವನಗರದವಳು ಇರುತ್ತಾಳೆ. 3 ನೇ ಪ್ರತಿವಾದಿಯ ಮೊದಲನೇಯ ಹೆಂಡತಿಯ ಮಗಳನ್ನು ಈ ದಾವೆಯಲ್ಲಿ ಪಕ್ಷಗಾರ ಎಂದು ಮಾಡಿಲ್ಲ. 5 ನೇ ಪ್ರತಿವಾದಿ ತಮಿಳುನಾಡಿನಲ್ಲಿ ಇದ್ದನು. ಮರಿಯಪ್ಪನ ಮಕ್ಕಳ ನಡುವೆ ಪಾಲುವಿಭಾಗ ಆಗಿಲ್ಲ. 5 ನೇ ಪ್ರತಿವಾದಿಗೂ ದಾವಾ ಆಸ್ತಿಗಳಲ್ಲಿ ಹಿಸ್ಸೆ ಇದೆ ಎಂದರೆ ಸರಿ. 5 ನೇ ಪ್ರತಿವಾದಿ ಮದುವೆಯಾಗಿಲ್ಲ. ಆತ 4 ನೇ ಪ್ರತಿವಾದಿಯ ಮನೆಯಲ್ಲಿ ಇದ್ದಾನೆ. ದಾವಾ ಮನೆಗಳು ಅವರವರ ಹೆಸರಿನಲ್ಲಿ ಇವೆ. ಸರ್ವೆ ನಂಬರ್-57 ಮತ್ತು 57/1 ಈ ಎರಡೂ ಜಮೀನುಗಳನ್ನು ಎಲ್ಲರೂ ಕೂಡಿ ಉಳುಮೆ ಮಾಡುತ್ತಿದ್ದೇವೆ ಎಂದರೆ ಸರಿ.

**2 ನೇ ಪ್ರತಿವಾದಿಯ ಪರ ವಕೀಲರು ಪಾಟೀ ಸವಾಲಿಗೆ ಸಮಯಕೇಳಿದ್ದು, ಸಕಾರಣ ಇಲ್ಲದೇ ಪಾಟೀ ಸವಾಲಿಗೆ ಸಮಯಕೇಳಿದ ಕಾರಣ, ಅವರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**7 ಮತ್ತು 8 ನೇ ಪ್ರತಿವಾದಿಗಳ ಪರ ವಕೀಲರು ಗೈರು ಹಾಜರು ಇದ್ದು, ಅವರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಮರುವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾ. ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೇ ಸರಿ ಇದೆ.

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಹರಿಹರ.